(*b*) if not. whether the Government would take action to prepare an estimate and start construction work early ?

SRI B. G. BANAKAR (Minister of State for Animal Husbandry).—[On behalf of. SRI H. C. SRIKANTAIAH (Minister of State for Minor Irrigation and Protocol)

(*a*) Yes.

(*b*) The estimate is under re-consideration due to technical reasons.

ಶ್ರೀ ಎನ್. ಬಸವಯ್ಯ.—ಸ್ವಾಮಿ, ಈ ಕೆರೆ ಕಟ್ಟಡದ ಬಗ್ಗೆ ಮೂರು ವರ್ಷದಿಂದ ಸರ್ವೆ ಮಾಡಿಸಿ ಟೆಕ್ನಿಕಲ್ ಒಪಿನಿಯನ್‌ಗೆ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದೀರಿ. ಈ ಒಂದು ಅಚ್ಚು ಕಟ್ಟಿಗೆ ಅದಷ್ಟು ಬೇಗ ನೀರನ್ನು ಒದಗಿಸಿದರೆ ಬೆಳೆ ಬೆಳೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ, ಆದುದರಿಂದ ಮಾನ್ಯಮಂತ್ರಿಗಳು ಈ ಕೆಲಸವನ್ನು ಎಷ್ಟು ದಿವಸದಲ್ಲಿ ಪೂರೈಸುವುದಕ್ಕೆ ಸಾಧ್ಯ ಎನ್ನುವುದನ್ನು ತಿಳಿಸುತ್ತೀರಾ?

† ಶ್ರೀ ಬಿ. ಜಿ. ಬಣಕಾರ್.—ಇದನ್ನು 15 ಕೋಟಿ ರೂಪಾಯಿಗಳ ಒಂದು ಸ್ಕೀಮಿನಲ್ಲಿ 1977-78ರ ಬಡ್ಜೆಟ್ಟಿನಲ್ಲಿ ಸೇರಿಸಲಾಗಿದೆ ಈ ಸಾರಿ ಈ ಕಾರ್ಯವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಬಸವಯ್ಯ.—ಸ್ವಾಮಿ, ಈ ಕೆರೆ ಕಟ್ಟಡದಿಂದ, ಗದ್ದೆ ಮತ್ತು ತೆಂಗಿನ ತೋಟಗಳಿಗೆ ಉಪಯೋಗವಾಗುತ್ತದೆ, ಈ ವರ್ಷ ಬಡ್ಜೆಟ್ಟಿನಲ್ಲಿ ಸೇರಿಸಿದೆ ಎಂದು ತಾವು ಹೇಳುತ್ತಿದ್ದೀರಿ, ಆದುದರಿಂದ ಈ ವರ್ಷವೇ ಈ ಕೆಲಸವನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ. ಜಿ. ಬಣಕಾರ್.—1977-78ನೇ ಸಾಲಿನಲ್ಲಿ ಅದರ ಕಾರ್ಯ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ —ಸ್ವಾಮಿ, ಟೆಕ್ನಿಕಲ್ ರೀಸನ್ಸ್‌ನಿಂದ ಎಸ್ಟಿಮೇಟ್, ರೀ ಕಂಸಿಡರೇಷನ್‌ನಲ್ಲಿ ಇದೆ ಎಂದು ಹೇಳಿತ್ತೀರಾ, ಆ ಟೆಕ್ನಿಕಲ್ ರೀಸನ್ಸ್ ಎನು ಎನು ಇದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಬಿ. ಜಿ. ಬಣಕಾರ್.—ಮಾನ್ಯಸದಸ್ಯರು ಪ್ರಶ್ನೆ ಕೇಳಿದ ಸಂದರ್ಭದಲ್ಲಿ ಆ ರೀತಿ ಇತ್ತು ಆದ್ದರಿಂದ ಆ ರೀತಿ ಉತ್ತರ ಹೇಳಿದೆ. ಈಗ ಯಾವ ತೊಂದರೆಯಿಲ್ಲ, 1977-78ನೇ ಸಾಲಿನಲ್ಲಿ ಆ ಕೆಲಸ ತೆಗೆದುಕೊಳ್ಳಲಾಗುವುದು.

Loss in Sericulture Industries

404 SRI M. SIDDAMADAIAH (Kollegal).—Will the Minister of State for Sericulture be pleased to state:—

(*a*) whether it has come to the notice of the Government that a loss of about Rupees 1,40,00,000 is sustained in Sericulture Industries taken up by Government during last 1½ years;

(*b*) if so, the persons responsible for the loss and action taken by the Government against them?

SRI K. SRIRAMULU (Minister of State for Sericulture).—

(*a*) Yes.

(b) For such losses, the previous officers of the Department including the previous Directors are responsible. Some of the Officers have retired from service, some Officers have retired under Rule 285 and some Officers are under suspension and necessary action is being taken against them.

ಶ್ರೀ ಎಂ. ಸಿದ್ದಮಾದಯ್ಯ.—ಸ್ವಾಮಿ, ನಷ್ಟವಾಗಿರುವ ಬಗ್ಗೆ ತಮ್ಮ ಉತ್ತರದಲ್ಲಿ ಹೇಳಿದು, ಎಂದು ಹೇಳಿದ್ದೀರಿ ಮತ್ತು ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದೀರಿ. ಇದರಲ್ಲಿ ನಷ್ಟವಾಗುವುದಕ್ಕೆ ಯಾರು ಯಾರು ಕಾರಣರು ಅವರ ಹೆಸರನ್ನು ಹೇಳುತ್ತೀರಾ?

† ಶ್ರೀ ಕೆ. ಶ್ರೀರಾಮುಲು.—ಈಗಾಗಲೇ 10 ಜನ ಅಧಿಕಾರಿಗಳು ನಿವೃತ್ತಿ ಹೊಂದಿದ್ದಾರೆ. 5 ಜನ ಅಧಿಕಾರಿಗಳು ಸಸ್ಪೆನ್‌ಷನಲ್ಲಿ ಇದ್ದಾರೆ, ಇನ್ನು ಮೂರು ಜನ ಅಧಿಕಾರಿಗಳು ಡಿಸ್‌ಮಿಸ್ ಆಗಿದ್ದಾರೆ.

ಶ್ರೀ ಎಂ. ಸಿದ್ದಮಾದಯ್ಯ.—ಯಾರು ಯಾರು ಎಂದು ಹೆಸರನ್ನು ಹೇಳಲಿಕ್ಕೆ ಸಾಧ್ಯವೆ?

ಶ್ರೀ ಕೆ ಶ್ರೀರಾಮುಲು:—ನಿವೃತ್ತಿ ಹೊಂದಿರತಕ್ಕ ಅಧಿಕಾರಿಗಳು, ರಾಮಮೂರ್ತಿ ವೇಣುಗೋಪಾಲ್ ನಾಯರ್ ಮತ್ತೆ ಇವರನ್ನು ಕೆಲಸಕ್ಕೆ ಇಟ್ಟುಕೊಂಡಿದೆ ಇನ್ನು ಹನುಮಂತಪ್ಪ, ಷಣ್ಮುಗಪ್ಪ, ಇವರು ವಾಲಂಟರಿ ರಿಟೈರ್ ಆಗಿದ್ದಾರೆ, ಹಾಗೆ ಡಿ ರಂಗಪ್ಪ ಚಂದ್ರಶೇಖರ್, ಬಸಪ್ಪ, ಕರಿಯಪ್ಪ, ಮುರುಗೇಶಯ್ಯ, ವಿಶ್ವನಾಥ, ಮೂರ್ತಿ, ನಾರಾಯಣಪ್ಪ, ಹೀಗೆ ಇದ್ದಾರೆ.

ಶ್ರೀ ಎಂ. ಸಿದ್ದಮಾದಯ್ಯ.—ಸ್ವಾಮಿ, ನಿವೃತ್ತಿ ಹೊಂದಿರತಕ್ಕ ಅಧಿಕಾರಿ ಮೇಲೆ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ. ಶ್ರೀರಾಮುಲು.—ಅಧಿಕಾರಿಗಳು ರೆಟೈರ್ ಆಗಿ ಮನೆಗೆ ಹೋದರು, ಕಾನೂನು ಪ್ರಕಾರ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬಹುದೋ ಆ ರೀತಿ ತೆಗೆದುಕೊಳುತ್ತೇವೆ.

SRI H. N. NANJE GOWDA.—Losses have amounted to Rs. 1.40 crores. This is not a smalll amount. I want to known the action that Government would take to recover this amount I want to know whether they will surcharge the officers concerned and recover his amount.

ಶ್ರೀ ಕೆ. ಶ್ರೀರಾಮುಲು.—ಅಧ್ಯಕ್ಷರೆ, ಲುಕ್ಸಾನು ಯಾವರೀತಿ ಆಗಿದೆ ಎಂದರೆ ಜನವರಿ 1976ರಲ್ಲಿ ಒಂದು ಕೆ ಜಿ. ರೇಪ್ಸೆ ತಯಾರು ಮಾಡಲಿಕ್ಕೆ 541 ಕಾಸ್ಟ್ ಆಗಿ ಅಡಳಿತದ ವೆಚ್ಚ 55 ರೂಪಾಯಿ ಆದರೆ 486 ರೂಪಾಯಿ ಖರ್ಚು ಮಾಡಿದ್ದಾರೆ. ಒಂದು ಕೆ.ಜಿ. ಕಕೂನ್ಸ್‌ಗೆ 40 ರೂಪಾಯಿಯಂತೆ ರೈತರಿಗೆ ಕೊಟ್ಟಂತಾಗಿದೆ ಫೆಬ್ರವರಿ 1976ರಲ್ಲಿ ಒಂದು ಕೆ. ಜಿ. ರೇಪ್ಸೆ ತಯಾರು ಮಾಡಲಿಕ್ಕೆ 640 ರೂಪಾಯಿ ಖರ್ಚು ಮಾಡಿದ್ದಾರೆ, ಆದರೆ ಅಡಳಿತ ವೆಚ್ಚ 55 ರೂಪಾಯಿ; ಇಲ್ಲಿ ಒಂದು ಕೆ.ಜಿ. ಕಕೂನ್ಸ್‌ಗೆ 46 ರೂಪಾಯಿಯಂತೆ ರೈತರಿಗೆ ಕೂಟ್ಟಂತಾಗಿದೆ. ಮಾರ್ಚ್ 1976ರಲ್ಲಿ ಒಂದು ಕೆ.ಜಿ ರೇಪ್ಸೆ ತಯಾರುಮಾಡಲಿಕ್ಕೆ 550 ರೂಪಾಯಿ ಖರ್ಚು ಮಾಡಿದ್ದಾರೆ. ಆದರೆ ಅಡಳಿತದ ವೆಚ್ಚ 55 ರೂಪಾಯಿ ಇಲ್ಲಿ ಒಂದು ಕೆ.ಜಿ. ಕಕೂನ್ಸ್‌ಗೆ 35 ರೂಪಾಯಿಯಂತೆ ರೈತರಿಗೆ ಕೊಟ್ಟಂತಾಗಿದೆ. ಇನ್ನು ರ್ಯಾನೆಡೆಟ್ 19 ರಿಂದ 12 ರೂಪಾಯಿಯವರೆಗೆ ಇದ್ದು ರೈತರಿಗೆ 35 ರೂಪಾಯಿಗಳಿಂದ 46 ರೂಪಾಯಿಗಳವರೆಗೆ ಕೊಟ್ಟಂತ ಲೆಕ್ಕ ಇದೆ. ಇದು ಹಿಂದೆ ಇದ್ದ ಅಧಿಕಾರಿ ಮಾಡಿರತಕ್ಕ ತಪ್ಪು, ಈಗ ಆ ಪರಿಸ್ಥಿತಿ ಇಲ್ಲ. 1976ರ ಡಿಸೆಂಬರ್ ಆದ ನಂತರ ಸರಾಸರಿ ಒಂದು ಕೆ ಜಿ. ರೇಪ್ಸೆ ತಯಾರಾ ಮಾಡಲಿಕ್ಕೆ 450 ರೂಪಾಯಿ ಖರ್ಚಾಗುತ್ತಿತ್ತು. ಈಗ ಅದು 325 ರೂಪಾಯಿಗೆ ಇಳಿದಿದೆ. ಅಂದರೆ 125 ರೂಪಾಯಿಗೆ ಇಳಿದಂತಾಗಿದೆ. ಇದು ನಿಜ ಸ್ವರೂಪವಾಗಿದ್ದರೆ ಇಷ್ಟು ಬೇಗನೆ ನಷ್ಟ ಇಳಿಯಲ್ಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇದು ಕೃತಕ

ವಾಗಿ ಮಾಡಿರತಕ್ಕ ನಷ್ಟ ಬಂದು ಒಪ್ಪಿಕೊಳ್ಳುವುದರಲ್ಲಿ ಯಾವ ಅಭ್ಯಂತರವಿಲ್ಲ. ಈ ಫೆಡರೇಷನ್ ನಲ್ಲಿ ಮಾನ್ಯನದನ್ಯರಾದ ಸಿದ್ದಯ್ಯನವರು ಸಹ ಡೈರೆಕ್ಟರ್ ಆಗಿದ್ದಾರೆ. ಇವ್ರೊತ್ತು ನಮ್ಮ ಉತ್ಪಾದನೆಯನ್ನು ಅವರಿಗೆ ಕೊಡುತ್ತಿದ್ದೇವೆ. ಅವರು ನಮ್ಮ ಕಡೆಯಿಂದ ಏನು ರೇಟಿಗೆ ತೆಗೆದು ಕೊಳ್ಳುತ್ತಾರೋ, ಅದಕ್ಕಿಂತ ಹೆಚ್ಚಿಗೆ ರೇಟಿಗೆ ಮಾರಾಟ ಮಾಡುತ್ತಾರೆ. ನೂರು ಒಂದು ಕೆ.ಜಿಗೆ 21 ರೂಪಾಯಿಗಳವರೆಗೆ ಹೆಚ್ಚಿಗೆ ಮಾರಾಟ ಮಾಡುತ್ತಾರೆ, ಆ ರೇಷ್ಮೆ ನಮ್ಮದಾಗಿದ್ದು, ಅದರ ದುಡ್ಡು ನಮಗೆ ಬರಬೇಕಾಗಿತ್ತು, ಅದು ಬಂದಿದ್ದರೆ ಲಾಸ್ ಆಗುತ್ತಾ ಇರಲಿಲ್ಲ. ಇದರಲ್ಲಿ ಹೊರ ಗಡೆ ವಾರಣಾಸಿಯಿಂದ ಸೇಲಂವರೆಗೆ ಒಟ್ಟು 9 ಬ್ರಾಂಚುಗಳು ಇವೆ. 9 ಬ್ರಾಂಚುಗಳಲ್ಲೂ ಎಷ್ಟಕ್ಕೆ ಮಾರಾಟವಾಗಿದೆ ಎಂದು ಬ್ಯಾಲೆನ್‌ಷೀಟ್‌ನಲ್ಲಿ ಎಲ್ಲಿಯೂ ಹೇಳಿಲ್ಲ, ಈ ಬಗ್ಗೆ ಸರ್ಕಾರದ ವರು ಕೇಳಿದರೂ ಕೂಡ ಫೆಡರೇಷನ್‌ನವರು ಉತ್ತರ ಹೇಳಿಲ್ಲ. ಆದುದರಿಂದ ನಾನು ಈಗಾಗಲೇ ಇದರ ಮೇಲೆ ಜುಡಿಸಿಯಲ್ ಪ್ರೊಬ್ ಮಾಡಿಸಬೇಕು ಎಂದು ಹೇಳಿದ್ದೇನೆ. ಇವಕ್ಕಿಂತ ಹೆಚ್ಚಿನ ಭರವಸೆ ಕೊಡಬೇಕಾದ ಅಗತ್ಯವಿಲ್ಲ ಎಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಸ್ವಾಮಿ ಈಗಾಗಲೇ ಇದರ ಬಗ್ಗೆ ನ್ಯಾಯಾಂಗ ತನಿಖೆ ಮಾಡುವುದಕ್ಕೆ ತೀರ್ಮಾನ ಮಾಡಿದ್ದೇವೆ ಎಂದು ಹೇಳಿದ್ದೇರಿ, ಇದು ಪತ್ರಿಕೆಯಲ್ಲೂ ಸಹ ವರದಿಯಾಗಿದೆ. ಆದುದರಿಂದ ಇದರಬಗ್ಗೆ ತಾವು ಎಷ್ಟು ದಿವಸದೊಳಗಾಗಿ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡುತ್ತೀರಾ? ಈಗ ತಾವು 35 ರಿಂದ 46 ರೂಪಾಯಿಗಳವರೆಗೆ ರೈತರಿಗೆ ಕೊಟ್ಟ ಹಾಗೆ ಲೆಕ್ಕ ತೋರಿಸಿದ್ದಾರೆ ಎಂದು ಹೇಳಿದ್ದೀರಿ ಖರಾರುವಾಕ್ಕಾಗಿ ರೈತರಿಗೆ ಎಷ್ಟು ಕೊಟ್ಟಿದ್ದಾರೆ ಎಂದು ಹೇಳಿಲ್ಲವೆ? ಸರ್ಕಾರದವರು ಈ ಬಗ್ಗೆ ಲೆಕ್ಕ ಕೇಳಿದರೂ ಫೆಡರೇಷನ್‌ನವರು ಲೆಕ್ಕ ಕೊಟ್ಟಿಲ್ಲ ಎಂದು ಹೇಳುವುದಾದರೆ ಸರ್ಕಾರ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿವೆ. ಸರ್ಕಾರಕ್ಕೆ ಸಾಕಷ್ಟು ಅಧಿಕಾರ ಇದ್ದು ಯಾವರೀತಿ ತಮ್ಮ ಅಧಿಕಾರ ಚಲಾಯಿಸಿದ್ದೀರಿ?

ಶ್ರೀ ಕೆ. ಶ್ರೀರಾಮುಲು —ಅಧ್ಯಕ್ಷರೆ, ನಾನು ಈಗಾಗಲೇ 46 ರೂಪಾಯಿಗಳವರೆಗೆ ರೈತರಿಗೆ ಕೊಟ್ಟ ಹಾಗೆ ಲೆಕ್ಕ ತೋರಿಸಿದ್ದಾರೆ ಎಂದು ಹೇಳಿದ್ದೇನೆ. ಹಾಗೆ ಕೊಟ್ಟಿದ್ದರೆ ಇನ್ನು 20 ಲಕ್ಷ ಜನರಿಗೆ ಅವರೇ ಕೆಲಸ ಕೊಡುತ್ತಿದ್ದರು ಇದು ಹಿಂದೆ ಮಾಡಿದಂತ ಅಧಿಕಾರಿಗಳ ತಪ್ಪು ಎಂದು ಹೇಳಿದ ಮೇಲೆ ಮತ್ತೆ ಉಪ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಇದನ್ನು ಸೂಪರ್‌ಸೀಡ್ ಮಾಡುವ ಬಗ್ಗೆ ಏನಾದರೂ ಯೋಚಿಸಿದ್ದೀರಾ?

ಶ್ರೀ ಕೆ. ಶ್ರೀರಾಮುಲು.—ಆದರ ಬಗ್ಗೆ ಇಲಾಖೆಯಿಂದಲೂ ರೆಕಮೆಂಡೇಷನ್ ಬಂದಿದೆ, ನಾನೂ ಸಹ ರೆಕಮೆಂಡೇಷನ್ ಮಾಡಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದು ಮಾನ್ಯಮುಖ್ಯಮಂತ್ರಿಗಳ ಬಳಿ ಇದೆಯೇ?

ಶ್ರೀ ಕೆ. ಶ್ರೀರಾಮುಲು —ಅದು ಕ್ಯಾಬಿನೆಟ್ ಮುಂದೆ ಇದೆ.

ಶ್ರೀ ಎಂ. ವಿ. ರಾಮಸ್ವಾಮಿ.—ಸ್ವಾಮಿ ತಮ್ಮ ಉತ್ತರದಲ್ಲಿ Some of the officer have retired ಎಂದು ಹೇಳಿದ್ದೀರಿ. ಇದರಲ್ಲಿ ತಾವು ಅವರನ್ನು ರೂಲ್ 285ರ ಕೆಳಗೆ ರಿಟೈರ್ ಮಾಡಿದ್ದೀರೋ? ಅಥವಾ ಸಸ್ಪೆಂಡ್ ಮಾಡಿದ್ದೀರೋ ಅಥವಾ ಅವರೇ ವಾಲಂಟರಿಯಾಗಿ ರಿಟೈರ್ ಆದರೋ ಎಂಬುದನ್ನು ದಯವಿಟ್ಟು ಸಭೆಗೆ ತಿಳಿಸುತ್ತೀರಾ ಸ್ವಾಮಿ?

ಶ್ರೀ ಕೆ. ಶ್ರೀರಾಮುಲು.—ಮಾನ್ಯ ಪಣ್ಮುಖಪ್ಪ ಎನ್ನುವವರು ತನಗೆ ಈ ಕೆಲಸ ಬೇಡ, ನಾನು ವಾಲಂಟರಿಯಾಗಿ ರಿಟೈರ್ ಆಗುತ್ತೇನೆಂದು ಕೇಳಿದ್ದರು. ಆಗ ಇವರ ಬಗ್ಗೆ ನಾನು ಇಲಾಖೆಯಲ್ಲ ಇವರು ರಿಟೈರ್ ಆಗುವುದರಿಂದ ಏನಾದರೂ ಸರ್ಕಾರಕ್ಕೆ ನಷ್ಟವಾಗುತ್ತದೆಯೇ ಎಂದು ಇಲಾಖೆಯವರನ್ನು ಕೇಳಿದಾಗ, ಇಲಾಖೆಯವರೂ ಕೂಡ ಇವರು ರಿಟೈರ್ ಆಗುವುದರಿಂದ ಸರ್ಕಾರಕ್ಕೆ ಏನೂ ನಷ್ಟವಾಗುವುದಿಲ್ಲ ಎಂದು ಹೇಳಿದ್ದರಿಂದ ನಾವು ಅವರಿಗೆ ರಿಟೈರ್ ಆಗುವುದಕ್ಕೆ ಅಪ್ಪಣೆ ಕೊಟ್ಟಿದ್ದೇವೆ,

SRI K. PUTTASWAMY.—I would like to know from the Government what is the necessity for holding a judicial enquiry when the Government have come to the conclusion that losses have been occasioned by the failure of the management? It is for the Government to take suitable steps I would like to know whether the Government wants to resort to judicial enquiry in order to escape the accountability to the legislature ?

ಶ್ರೀ ಕೆ. ಶ್ರೀರಾಮುಲು.—ಮಾನ್ಯ ಅಧ್ಯಕ್ಷರೆ, ಜುಡಿಷಿಯರಿ ಪ್ರೋಬ್ ಮಾಡಬೇಕೆರದು ಸರ್ಕಾರದ ಅಂದಜೆ ಇರಾಜೆಯನ್ನು ಹೊಂದಿರುವ ಮಂತ್ರಿಗಳೇ ಖುದ್ದಾಗಿ ತಾವೇ ಹೇಳಿಕೆಯನ್ನು ಬೇರೆಯವರು ಬಂದು ಕೇಳುವುದಕ್ಕೆ ಮೊದಲೇ ಹೇಳಿರಬೇಕಾದರೆ ಇದನ್ನು ತಮ್ಮ ಜವಾಬ್ದಾರಿ ತಪ್ಪಿಸಿಕೊಳ್ಳುವುದಕ್ಕೋಸ್ಕರ ಹೇಳಿರುವುದಲ್ಲ. ಅಲ್ಲದೆ ಆ ರೀತಿ ಯಾರೂ ಕೂಡ ಹೇಳುವುದೂ ಇಲ್ಲ.

SRI K. PUTTASWAMY.—He has not understood my point. It is the Government that has the right to take action. Ultimately the Government have come to the conclusion that there is mismanagement and all kinds of fraud. It is for the Government to take action and not refer it to judicial enquiry and thus escape their liability.

ಶ್ರೀ ಕೆ. ಶ್ರೀರಾಮುಲು.—ಮಾನ್ಯ ಅಧ್ಯಕ್ಷರೇ, ಮಾನ್ಯ ಪುಟ್ಟಸ್ವಾಮಿಯವರು ಜುಡಿಷಿಯರಿ ಪ್ರೋಬ್ ಮಾಡುವುದು ಬೇಡವೆಂದು ಹೇಳುವುದಾದರೆ.....

SRI K. PUTTASWAMY.—On the other hand the Government have thoroughly failed in discharging their responsibility. If it is the decision of the Government that everything has been mismanaged then they have no other way except to quit office and resign enmasse.

ಶ್ರೀ ಕೆ. ಶ್ರೀರಾಮುಲು —ಮಾನ್ಯ ಅಧ್ಯಕ್ಷರೆ, ಮಾನ್ಯ ಪುಟ್ಟಸ್ವಾಮಿಯವರೂ ಕೂಡ ಪಾಪ ಹಿಂದೆ ಮಂತ್ರಿಗಳಾಗಿದ್ದರು.....

ಶ್ರೀ ಕೆ. ಪುಟ್ಟಸ್ವಾಮಿ.—ನಾನೂ ಮಂತ್ರಿಯಾಗಿದ್ದೆ. ಅಷ್ಟು ಹೇಳಿದರೆ ಸಾಕು, ಅದರ ಜೊತೆಗ ''ಪಾಪ'' ಎಂದು ಏತಕ್ಕೆ ಹೇಳುತ್ತೀರಿ ? ಸರ್ಕಾರದವರು ಈ ರೀತಿ ತಾರಮ್ಮಯ್ಯನನ್ನು ಆಡುವುದು ಸರಿಯಲ್ಲ.

ಶ್ರೀ ಕೆ. ಶ್ರೀರಾಮುಲು.—ಶರಾವತಿ ಪ್ರಕರಣ ಇನ್ನೂ ಮುಂತಾದ್ದು ಮಾನ್ಯ ಪುಟ್ಟಸ್ವಾಮಿಯವರ ಕಾಲದಲ್ಲೂ ಬಂದಿತ್ತು. ಇದು 1962 ರಿಂದಲೂ ಆಗುತ್ತಲೇ ಇದೆ.

ಶ್ರೀ ಕೆ. ಪುಟ್ಟಸ್ವಾಮಿ.—ಆಗ ಗೌರ್ನಮೆಂಟ್‌ನವರು ಡಿಫೆಂಡ್ ಮಾಡಿಕೊಳ್ಳುತ್ತಿದ್ದರು.

ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು.—ಮಾನ್ಯ ಅಧ್ಯಕ್ಷರೆ, ಹಿಂದೆ ಒಂದು ಸಾರಿ ಮಾನ್ಯ ಮಂತ್ರಿಗಳು ನಾನು ಕೇಳಿದ್ದ ಪ್ರಶ್ನೆಗೆ ಉತ್ತರ ಕೊಡುತ್ತಾ ಈ ಇರಾಜೆಯಲ್ಲಿ ಸುಮಾರು 10 ಕೋಟಿ ರೂಪಾಯಿಗಳು ನಷ್ಟ ಆಗಿದೆ ಎಂದು ಹೇಳಿದ್ದಾರೆ. ಈಗ 1 ಕೋಟಿ 0 ಲಕ್ಷ ರೂಪಾಯಿ ನಷ್ಟ ಆಗಿದೆ ಎಂದು ಹೇಳುತ್ತಾರೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರೇ ತಮ್ಮ ಉತ್ತರದಲ್ಲಿಈ ನಷ್ಟ ಬಹಳ ಹಿಂದಿನಿದಲೂ ಆಗುತ್ತಲೇ ಬಂದಿದೆ ಎಂದು ಹೇಳಿದ್ದಾರೆ. ಈ ಇರಾಜೆಯ ಲೆಕ್ಕ ಪತ್ರಗಳನ್ನು ಯಾರೂ ಆಡಿಟ್ ಮಾಡುತ್ತಲೇ ಇರಲಿಲ್ಲವೆ ? ಇದನ್ನು Queen of Textiles ಎಂದು ಹೇಳುತ್ತಾರೆ ಆದ್ದರಿಂದ ಇದಕ್ಕಾಗಿಯೇ ಒಂದು ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್ ಏತಕ್ಕೆ ಮಾಡಬಾರದೆಂದು ತಮ್ಮನ್ನು ಕೇಳಬಯಸುತ್ತೇನೆ.

ಶ್ರೀ ಕೆ. ಶ್ರೀರಾಮುಲು.—ನಾನು ಈಗತಾನೇ ಹೇಳಿದೆ. ನಾನು ಈ ಅಧಿಕಾರಕ್ಕೆ ಬಂದ ಮೇಲೆ 8-9 ತಿಂಗಳಲ್ಲಿ ಸಾಕಷ್ಟು ನಷ್ಟವನ್ನು ಕಡಿಮೆ ಮಾಡಿದ್ದೇನೆ. ಇನ್ನೂ ಕೂಡ ಈ ನಷ್ಟವನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ, ನಾನು ಇದರಲ್ಲಿ ನಡೆದಿರುವ ನಷ್ಟವನ್ನು ಹೇಳಿದ್ದೇನೆ.

ಶ್ರೀ ಎಂ. ಸಿದ್ದಮಾದಯ್ಯ.—ಒಂದು ಕೆ.ಜಿ.ಗೆ 36 ರಿಂದ 43 ರೂ. ವರೆಗೆ ರೈತರಿಗೆ ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ತಾವು ಈರೀತಿ ರಿಪೋರ್ಟ್ ಕೊಡುವುದನ್ನು ಕೈಬಿಡಬೇಕೆಂದು ಹೇಳಬಯಸುತ್ತೇನೆ. ಏಕೆಂದರೆ ಇದರಿಂದ ನಮ್ಮ ಸೊಸೈಟಿಯಲ್ಲಿ ಕೂಡ ಲಾಸ್ ಆಗಿದೆ. ಸೊಸೈಟಿಗೂ, ಇದಕ್ಕೂ ಸಂಬಂಧವಿಲ್ಲ. ಸೊಸೈಟಿಯವರು ಒಂದು ರೇಟ್ ಫಿಕ್ಸ್ ಮಾಡಿದರೆ ಅವರು ಅದರಂತೆ ಮಾರುತ್ತಾರೆ, ಇಲ್ಲದಿದ್ದರೆ ಹಾಗೆಯೇ ಇಟ್ಟಿರುತ್ತಾರೆ.

ಶ್ರೀ ಕೆ. ಶ್ರೀರಾಮುಲು.—ಮಾನ್ಯ ಸದಸ್ಯರು ಏನು ತಿಳಿದುಕೊಂಡು ಈರೀತಿ ಕೇಳುತ್ತಿದ್ದಾರೋ ನನಗಂತೂ ಗೊತ್ತಾಗುತ್ತಿಲ್ಲ. ಲೆಕ್ಕದಲ್ಲಿ ತೋರಿಸಿರುವ ಪ್ರಕಾರ ಪ್ರತಿಯೊಬ್ಬ ರೈತನಿಗೂ 46 ರೂಪಾಯಿಗಳು ಸೇರಿರಬೇಕು. ಈರೀತಿ ಸೇರಿದ್ದರೆ ಅವರಿಗೆ ಲಾಸ್ ಆಗುತ್ತಿರಲಿಲ್ಲ. ಇನ್ನೊಂದು ಕಡೆ ಫೆಡರೇಷನ್‌ನವರು 248 ರೂ. ನಂತೆ ತೆಗೆದುಕೊಂಡು 271 ರೂಪಾಯಿಯಂತೆ ಮಾರಾಟ ಮಾಡಿದ್ದಾರೆ. ಇಲ್ಲಿ ಬರುವ 23 ರೂಪಾಯಿಗಳು ಏನಾಯಿತು ? ತಾವು ಆ ಸಂಸ್ಥೆಯ ಡೈರೆಕ್ಟರ್ ಆಗಿದ್ದೀರಿ ಮತ್ತು ಇಲ್ಲಿ ಶಾಸಕರೂ ಆಗಿದ್ದೀರಿ ಅಂದರೆ ಎರಡೂ ಕಡೆ ಜವಾಬ್ದಾರಿ ಸ್ಥಾನದಲ್ಲಿದ್ದೀರಿ. ತಾವೇ ಆ ಬ್ಯಾಲೆನ್ಸ್ ಪೀಚನ್ನು ಯಾರಿಗಾದರೂ ತೋರಿಸಿ ಒಪ್ಪಿಸಿ.

Promotion of Lecturers as Readers in Private Colleges

476. SRI C. V. VENKATARAYAPPA (Chickaballapur).—Will the Minister for University & Wakfs be pleased to state :—

(*a*) the basis on which Lecturers are promoted as Readers in private Colleges (Arts and Science) ;

(*b*) whether the period of service in the same Institution if counted or whether period of service put in, in different Institutions is counted for purposes of promotion ?

SRI S. M. YAHYA (Minister for University Education and Wakfs).—

(*a*) Seniority-cum-merit.

(*b*) The period of service rendered in different institutions under the same management is taken into account for purpose of promotion.

SRI C. V. VENKATARAYAPPA.—In answer to question (a) it is stated the basis for promotion is seniority cum merit. In the private colleges confidential reports are not maintained. How do you judge the merit ?

† SRI S. M. YAHYA.—The well established promotion pattern is 1:2:3:12. For an unit of 16 teachers there shall be one professor, three Readers and 12 Lecturers. On that basis it can be worked out.

SRI C. V. VENKATARAYAPPA.—For promotion you have said service cummerit. How do you judge the merit of a lecturer ?